
# ಮದುವೆ ಆಗತ್ಯವೇ?

ಆರ್. ಶ್ರೀನಾಗೇಶ್



ಈ ಹಿಂದೆ ಮಕ್ಕಳು ಒಂದು ವಯಸ್ಸು ತಲುಪಿದಾಗ ಅವರ ಮದುವೆ ಮಾಡುವ ಯೋಚನೆ ಪೋಷಕರಿಗೆ ಬರುತ್ತಿತ್ತು. ಮದುವೆ ಆದರೆ ತಮ್ಮ ಹೊಣೆಗಾರಿಕೆ ಮುಗಿಯಿತು ಎಂದು ಪೋಷಕರು ನಂಬಿದರೆ, ಮದುವೆಯಾದವರು ಹೊಸ ಜೀವನದ ಮಾಧುರ್ಯವನ್ನು ಸವಿಯುತ್ತ, ಹೊಸ ಜವಾಬ್ದಾರಿಗಳನ್ನು ನಿಭಾಯಿಸಿಕೊಂಡು ವಂಶಾಭಿವೃದ್ಧಿಗೆ ಕಾಣಿಕೆ ನೀಡಿ ಹೆಮ್ಮೆ ಪಡುತ್ತಿದ್ದರು. ಇದಕ್ಕೆ ಅಪವಾದಗಳೂ ಇರದೆ ಇರಲಿಲ್ಲ.

ಇಂದು ಮದುವೆಯಾದವರು ಅನುಭವಿಸುತ್ತಿರುವ ಯಾತನೆಗಳನ್ನು ಗಮನಿಸಿದ ಹಲವಾರು ಯುವಕ ಯುವತಿಯರು 'ಮದುವೆ ಆಗಲೇ ಬೇಕೇ? ಅದು ಅಷ್ಟೊಂದು ಅಗತ್ಯವಿದೆಯೇ?' ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಿದ್ದಾರೆ.

ಮದುವೆ ಎಂಬುದು ಜೀವನದ ಒಂದು ಘಟ್ಟ. ತಮ್ಮದೇ ಸಂಸಾರವನ್ನು ಪ್ರಾರಂಭಿಸಿಕೊಂಡು ಮುಂದುವರೆಯುವ ಹಂತಕ್ಕೆ ಮಕ್ಕಳು ತಲುಪಿದ್ದಾರೆ ಎಂಬುದು ಮಕ್ಕಳು ಒಂದು ವಯಸ್ಸಿಗೆ ಬಂದಾಗ ಪೋಷಕರಲ್ಲಿ, ಬಂಧುವರ್ಗದವರಲ್ಲಿ ಬರುವ ಭಾವನೆ. ಆರ್ಥಿಕವಾಗಿ ಸ್ವಾವಲಂಬಿಗಳಾಗಿ, ಹೊಣೆಗಾರಿಕೆ ಹೊರುವ, ಸಮಸ್ಯೆಗಳನ್ನು ಸ್ವತಃ ಎದುರಿಸುವ ಮಾನಸಿಕ ಸಾಮರ್ಥ್ಯ ಹೊಂದಿರುವವರು ತಮ್ಮದೇ ಸಂಸಾರವನ್ನು ಪ್ರಾರಂಭಿಸಿಕೊಂಡು ವಂಶಾಭಿವೃದ್ಧಿಗೆ ತಮ್ಮ ಕಾಣಿಕೆ ನೀಡುತ್ತಾರೆ.

ನನ್ನ ಪ್ರಕಾರ ಮದುವೆಯಾಗ ಬಯಸುವವರಿಗೆ ನಿಯತ ಕಾಲಿಕ ಆದಾಯ ತರುವ ಉದ್ಯೋಗ ಇರಬೇಕು, ಸಮಸ್ಯೆಗಳನ್ನು ಎದುರಿಸುವ ಕೌಶಲ್ಯ ಇರಬೇಕು, ಹೊಣೆಗಾರಿಕೆಯ ಪ್ರಜ್ಞೆ ಇರಬೇಕು. ಇಂದಿನ ಸಾಮಾಜಿಕ ವಾತಾವರಣದಲ್ಲಿ ದಂಪತಿಗಳಿಬ್ಬರೂ ದುಡಿಯುವುದು ಒಂದು ಅನಿವಾರ್ಯತೆಯಾಗಿ ಹೊರಹೊಮ್ಮಿರುವುದರಿಂದ ಅದರಿಂದ ಉದ್ಭವಿಸುವ ಹೆಚ್ಚುವರಿ ಅನಾನುಕೂಲಗಳನ್ನು, ಅದು ತರುವ ಲಾಭಗಳ ಜೊತೆ ತುಲನೆ ಮಾಡಿಕೊಂಡು ಜೀವನ ನಡೆಸಲು ಸನ್ನದ್ಧರಾಗಬೇಕು.

## ಮದುವೆ ಆಗುವುದಾದರೂ ಯಾಕೆ?

ವಯಸ್ಸಾಗುತ್ತ ಸಹಜವಾಗಿ ಉಂಟಾಗುವ ದೇಹದ ಬಯಕೆಗಳನ್ನು ತೀರಿಸಿಕೊಳ್ಳಲು ರಚಿಸಲಾದ ಒಂದು ಸಾಮಾಜಿಕ ವ್ಯವಸ್ಥೆ ಎಂದೇ? ವಂಶಾಭಿವೃದ್ಧಿಗಾಗಿಯೆ? ತಮ್ಮ ಬಳಿ ಈಗ ಇಲ್ಲದ ಲೌಕಿಕ ಸವಲತ್ತುಗಳನ್ನು ಪಡೆಯಲು ಮದುವೆ ಒಂದು ದಾರಿ ಎಂದೇ? ಸಂಬಂಧದಿಂದ ವಾಣಿಜ್ಯ ವಹಿವಾಟಿಗೆ, ವ್ಯಾಪಾರಕ್ಕೆ ಬಲ ದೊರಕುವುದು ಎಂದೇ? ಪೋಷಕರ ಜವಾಬ್ದಾರಿ ಕಳೆಯುವುದು ಎಂದೇ? ಎಲ್ಲರೂ ಆಗುತ್ತಾರೆ, ಅದಕ್ಕೆ ನಾವೂ ಆಗುವುದು ಒಳ್ಳೆಯದು ಎಂದೇ? ಅಥವಾ ಮದುವೆಯಾಗದಿದ್ದರೆ ಜನಕ್ಕೆ ಉತ್ತರ ಹೇಳಬೇಕಾಗುವುದು ಎಂದೇ?

ದಾಂಪತ್ಯ ಯಾಕೆ ಸಮಸ್ಯೆಗಳನ್ನು ಸೃಷ್ಟಿ ಮಾಡುತ್ತದೆ ಎಂದು ಮೊದಲು ಅವಲೋಕಿಸುವುದು ಉತ್ತಮ. ಆಗ ಈ ಪ್ರಶ್ನೆಗೆ ಉತ್ತರಗಳು ಸುಲಭವಾಗಿ ಹೊಳೆಯುತ್ತವೆ.

ದೀಪಾ (ಹೆಸರು ಬದಲಾಯಿಸಲಾಗಿದೆ) ಳ ಪೋಷಕರು ಒಂದು ಸಂಬಂಧ ಹುಡುಕಿದರು. ಇಬ್ಬರು ಗಂಡು ಮಕ್ಕಳು. ಇವನು ಎರಡನೆಯವನು. ಮೊದಲ ಮಗ ಬೇರೆ ಮನೆ ಮಾಡಿದ್ದಾನೆ. ಆದರೆ ಹುಡುಗ ದೀಪಾಳಿಗೆ ಒಪ್ಪಿಗೆಯಾಗಿರಲಿಲ್ಲ. ಅವನ ನಡವಳಿಕೆಯಲ್ಲಿ ಏನೋ ಅಸಹಜತೆ ಇದೆ ಎನಿಸಿತು. ಅದೇ ಸಮಯದಲ್ಲಿ ಆಕೆಗೆ ಮತ್ತೊಂದು ಸಂಬಂಧ ಬಂದಿತು. ಆ ಹುಡುಗ ಒಪ್ಪಿಗೆಯಾದ. ಆದರೆ ಅವನಿಗೆ ತಂದೆ– ತಾಯಿ ಇರಲಿಲ್ಲ. ಉತ್ತಮ ನೌಕರಿ ಇತ್ತು. ನಡವಳಿಕೆಯಲ್ಲಿ ವಿಧೇಯತೆ ಇತ್ತು. ಪೋಷಕರು, 'ಎಲ್ಲ ರೀತಿಯಲ್ಲಿಯೂ ನಿನಗೆ ಅನುರೂಪನಾದ ವರನೇ ಬೇಕು ಎಂದರೆ ಸಿಗುವುದಿಲ್ಲ, ರಾಜಿ ಮಾಡಿಕೊಳ್ಳಬೇಕು, ಮತ್ತೊಬ್ಬ ಹುಡುಗನಿಗೆ ಪೋಷಕರಿಲ್ಲ. ಈ ಹುಡುಗನಿಗೆ ಇದ್ದಾರೆ, ಸಮಸ್ಯೆ ಏನಾದರೂ ಬಂದರೆ ಅವರು ನೆರವಿಗೆ ಬರುತ್ತಾರೆ. ಅವನನ್ನೇ ಮಾಡಿಕೊ' ಎಂದರು. ಪೋಷಕರ ಮಾತಿಗೆ ದೀಪಾ ಒಪ್ಪಿದಳು.

ಮದುವೆಗೆ ಮುಂಚೆ ಹುಡುಗನ ಪೋಷಕರ ಧೋರಣೆ ಮತ್ತು ಹುಡುಗ ನಡೆದುಕೊಂಡ ರೀತಿ ದೀಪಾಳಿಗೆ ಮನಸ್ಸಿಗೆ ಮುಜುಗರ ತಂದಿತು. ಹೊಂದಿಕೊಂಡು ಹೋಗಬೇಕಮ್ಮ ಎಂದು ಪೋಷಕರು, ಹಿರಿಯರು ಹೇಳಿದುದಕ್ಕೆ ಬೆಲೆ ಕೊಟ್ಟು ಕೊನೆಗೆ ಅವನನ್ನೇ ಮದುವೆಯಾದಳು.

ಮದುವೆಯಾದ ಬಳಿಕ ನಿಜವಾದ ಸಂಕಷ್ಟಗಳು ಒಂದೊಂದೇ ಬರತೊಡಗಿದವು.

ಹುಡುಗನಿಗೆ ನೌಕರಿಯೂ ಇರಲಿಲ್ಲ, ಅದರ ಬಗ್ಗೆ ಸುಳ್ಳು ಹೇಳಿದ್ದರು ಎಂದು ಮದುವೆ ಆದ ಮೇಲೆ ತಿಳಿಯಿತು. ವಿಷಯ ತಿಳಿದಾಗ ದೀಪಾಳ ಪೋಷಕರಿಗೆ ಆದ ಸಂಕಟ ಅಷ್ಟಿಷ್ಟಲ್ಲ. ಆದರೂ ಅವರು ಈ ಸಮಸ್ಯೆಯನ್ನು ಪರಿಹರಿಸಬಹುದು ಎಂದುಕೊಂಡರು. ಆದರೆ ಸ್ವಲ್ಪ ದಿನಗಳಲ್ಲೇ ಇನ್ನೊಂದು ಸತ್ಯ ಗೊತ್ತಾಯಿತು. ಆ ಕುಟುಂಬದಲ್ಲಿ ಮೊದಲ ಮಗ ಬೇರೆ ಸಂಸಾರ ಹೂಡಲು ಕಾರಣ ಅವನ ಪೋಷಕರು ಸೊಸೆಯನ್ನು ಹಿಂಸೆ ಮಾಡುತ್ತಿದ್ದುದು ಎಂಬುದು ಬಯಲಿಗೆ ಬಂತು. ಈ ಸಮಸ್ಯೆಯನ್ನೂ ಪ್ರತ್ಯೇಕ ಮನೆ ಮಾಡುವ ಮೂಲಕ ಪರಿಹರಿಸಬಹುದು ಎನ್ನುವ ಆಲೋಚನೆ ದೀಪಾಳ ಪೋಷಕರಿಗೆ ಬಂತು. ಆದರೆ ಮದುವೆಯಾದ ನಂತರ ಇನ್ನೂ ಒಂದು ಆಘಾತಕಾರಿ ಸಂಗತಿ ಗೊತ್ತಾಯಿತು. ಅದನ್ನು ಮಾತ್ರ ಪೋಷಕರಿಗಾಗಲೀ, ದೀಪಾಳಿಗಾಗಲಿ ಸಹಿಸಿಕೊಳ್ಳಲು ಸಾಧ್ಯವೇ ಆಗಲಿಲ್ಲ.

(ಮುಂದಿನ ವಾರಕ್ಕೆ)